


بسم اللهِ الرّحمٰن الرّحيم

# ಅಮೇರಿಕ ಪ್ರವಾಸ – ಅವಲೋಕನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–10–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ದಿನಗಳಲ್ಲಿ ನಾನು ಅಮೇರಿಕದ ಕೆಲವು ಜಮಾಅತುಗಳ ಪರ್ಯಟನೆಯಲ್ಲಿದ್ದೆ. ಅದು ಅತ್ಯುತ್ತಮವಾಗಿ ಪೂರ್ತಿಗೊಂಡಿದೆ. ಎಂ.ಟಿ.ಎ. ಮತ್ತು ಜಮಾಅತಿನ ಇತರ ಇಲೆಕ್ಟ್ರೋನಿಕ್ ಮೀಡಿಯದ ಮೂಲಕ ಈ ಎಲ್ಲ ವಾರ್ತೆಗಳು ಪ್ರಸಾರವಾಗುತ್ತಿದ್ದುವು. ಇತರ ಚ್ಯಾನೆಲ್‌ಗಳೂ ಸಾಕಷ್ಟು ಕವರೇಜ್ ನೀಡುತ್ತಿದ್ದುವು. ಎಲ್ಲ ರೀತಿಯಲ್ಲೂ ಅಲ್ಲಾಹನ ಅನುಗ್ರಹಗಳ ದೃಶ್ಯಗಳು ಕಾಣುವಂತಾಯಿತು. ಇದರಿಂದ ನಮ್ಮವರ ಮತ್ತು ಅನ್ಯರ ಮೇಲೆ ಬಹಳ ಧನಾತ್ಮಕ ಪ್ರಭಾವಗಳು ಉಂಟಾದುವು. ಜನರ ಭೇಟಿಯ ನಂತರ ಅವರ ಭಾವನಾತ್ಮಕ ಅನಿಸಿಕೆಗಳ ಒಂದು ದೊಡ್ಡ ಪಟ್ಟಿ ಇದೆ. ನಮಾಝ್‌ಗಳಲ್ಲಿ ಮಹಿಳೆಯರ, ಮಕ್ಕಳ ಮತ್ತು ಜನರ ಹಾಜರಿಯು ಎಲ್ಲಡೆ ವ್ಯವಸ್ಥಾಪಕರ ಪ್ರತೀಕ್ಷೆಗಿಂತ ಅಧಿಕವಾಗುತಿತ್ತು. ಜನರ ಹೃದಯಗಳಲ್ಲಿ ಖಿಲಾಫತಿನೊಂದಿಗೆ ಪ್ರೀತಿ ಮತ್ತು ನಿಷ್ಠೆಯಿದೆ ಎಂದು ಅವರ ಭಾವನೆಗಳಿಂದ ಸ್ಪಷ್ಟವಾಗಿ ಕಾಣಬಹುದಾಗಿತ್ತು. ವಿದ್ಯಾವಂತರು, ಶ್ರೀಮಂತರು, ಬಡವರು, ಮಕ್ಕಳು, ಹಿರಿಯರು ಮತ್ತು ಭೌತಿಕ ಕೆಲಸಗಳಲ್ಲಿ ನಿರತರಾಗಿರುವವರು ಕೂಡ ಮಸೀದಿಯೊಳಗೆ ನಮಾಝ್‌ಗಳಲ್ಲಿ ಹಾಜರಾಗಲು ಗಂಟೆಗಟ್ಟಲೆ ಸಾಲುಗಟ್ಟಿ ನಿಲ್ಲುತ್ತಿದ್ದರು. ಅಲ್ಲಾಹನ ಕೃಪೆಯಿಂದ ಧರ್ಮ ಮತ್ತು ಜಮಾಅತಿನೊಂದಿಗೆ ಪ್ರೀತಿ ಹಾಗೂ ಖಿಲಾಫತ್‌ನೊಂದಿಗೆ ಸಂಬಂಧವು ಅಮೇರಿಕ ಜಮಾಅತಿನ ಸದಸ್ಯರ ಹೃದಯಗಳಲ್ಲಿ ಇದೆಯೆಂಬುದು ಈ ಬದಲಾವಣೆಯಿಂದ ಸ್ಪಷ್ಟವಾಗುತ್ತದೆ. ಹನ್ನೊಂದು ಹನ್ನೆರಡು ವರ್ಷ ಪ್ರಾಯದ ಮಕ್ಕಳು ಕೂಡ ಕೋವಿಡ್ ಟೆಸ್ಟಿಂಗ್ ಇತ್ಯಾದಿಗಳ ಕಾರಣದಿಂದ ಗಂಟೆಗಟ್ಟಲೆ ಲೈನಿನಲ್ಲಿ ನಿಲ್ಲುತ್ತಿದ್ದರು. ಆದರೆ ಯಾವತ್ತೂ ಯಾರೂ ಯಾವುದೇ ಆಕ್ಷೇಪ ಎತ್ತಲಿಲ್ಲ.

ಈ ಪ್ರಾಮಾಣಿಕತೆ ಮತ್ತು ನಿಷ್ಠೆಯ ದೃಶ್ಯಗಳನ್ನು ಅಲ್ಲಾಹನು ಸದಾ ಅಮೇರಿಕ ಜಮಾಅತಿನ ವ್ಯಕ್ತಿಗಳಲ್ಲಿ ನೆಲೆನಿಲ್ಲಿಸಲಿ ಮತ್ತು ಮಸೀದಿಗಳು ಕೂಡ ಇದೇ ರೀತಿಯಲ್ಲಿ ಜನನಿಬಿಡವಾಗಿರಲಿ. ಸಾಮಾನ್ಯವಾಗಿ ಅಮೇರಿಕದಲ್ಲಿ ಜನರು ಧರ್ಮವನ್ನು ಮರೆತುಬಿಡುತ್ತಾರೆ. ಆದರೆ ಜಮಾಅತಿನ ಹೆಚ್ಚಿನವರಲ್ಲಿ, ಆರ್ಥಿಕವಾಗಿ ದುರ್ಬಲರಲ್ಲಿ ಕೂಡ ತಮ್ಮ ಮತ್ತು ತಮ್ಮ ಮಕ್ಕಳು ಧರ್ಮದೊಂದಿಗೆ ಹೊಂದಿಕೊಂಡಿರಲು ವಿಶೇಷವಾಗಿ ದುಆ ಮಾಡುವ ಕಡೆಗೆ ಗಮನವಿರುವುದಾಗಿ ಕಂಡುಬಂತು. ಅಲ್ಲಾಹನು ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಸದಾ ವರ್ಧಿಸುತ್ತಾ ಇರಲಿ. ಲಜ್ನ, ಅನ್ಸಾರ್, ಖುದ್ದಾಮ್ ಮತ್ತು ಮಕ್ಕಳು ಕೂಡ ಬಹಳ ಪರಿಶ್ರಮಪಟ್ಟು ಆ ದಿನಗಳಲ್ಲಿ ತಮ್ಮ ಡ್ಯೂಟಿಗಳನ್ನು ಈಡೇರಿಸುತ್ತಿದ್ದರು. ಅನೇಕ ದಿನಗಳು ನಿದ್ದೆ ಮಾಡದೇ ತಯಾರಿಗಳನ್ನು ಮಾಡಿದರು. ಹಾಜರಿಯು ಸಹ ಎಲ್ಲಡೆ ಸಾವಿರಗಳಷ್ಟು ಇರುತ್ತಿತ್ತು. ಬೈತುರ್ರಹ್ಮಾನಿನಲ್ಲಿ ಜಲ್ಸಗಿಂತ ಹೆಚ್ಚು ಹಾಜರಿಯಿತ್ತು. ಆದರೆ ಬಹಳ ವ್ಯವಸ್ಥಾಪಿತವಾಗಿ ಅವರು ತಮ್ಮ ಕೆಲಸಗಳನ್ನು ನಿಭಾಯಿಸಿದರು. ಅಮೇರಿಕದ ಜಮಾಅತಿನ ಸದಸ್ಯರಲ್ಲಿ ಈ ಬದಲಾವಣೆ ತಾತ್ಕಾಲಿಕವಾಗದೇ ಎಂದೆಂದಿಗೂ ಇರುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನು ಅನ್ಯರ ಹೃದಯಗಳಲ್ಲೂ ಅಸಾಮಾನ್ಯವಾದ ಪ್ರಭಾವವನ್ನು ಉಂಟುಮಾಡಿರುವನು. ಅಲ್ಲಾಹನು ಅವರ ಹೃದಯಗಳನ್ನು ಇನ್ನಷ್ಟು ತೆರೆಯಲಿ ಮತ್ತು ಈ ಜನರು ಸತ್ಯವನ್ನು ಅರಿಯುವಂತಾಗಲಿ.

ಝಿಯೋನಿನಲ್ಲಿ ಫತ್‌ಹೇ ಅಝೀಂ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ 161 ಮುಸ್ಲಿಮೇತರ ಮತ್ತು ಅಹ್ಮದಿಯೇತರ ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ಕಾಂಗ್ರೆಸ್‌ಮೆನ್, ಕಾಂಗ್ರೆಸ್‌ವಿಮೆನ್, ಮೇಯರ್‌ಗಳು, ಡಾಕ್ಟರರು, ಪ್ರೊಫೆಸರರು, ಅಧ್ಯಾಪಕರು, ವಕೀಲರು, ಇಂಜಿನಿಯರ್‌ಗಳು ಮತ್ತು ವಿವಿಧ ವಿಭಾಗಗಳಿಗೆ ಸಂಬಂಧಪಟ್ಟ ವ್ಯಕ್ತಿಗಳು ಇದ್ದರು.

(ಹುಝೂರ್ ಓದಿ ಹೇಳಿದ ಅತಿಥಿಗಳ ಅನಿಸಿಕೆಗಳಲ್ಲಿ ಕೆಲವನ್ನು ನಿಮ್ಮ ಮುಂದಿರಿಸುತ್ತೇವೆ.) ಝಿಯೋನಿನ ಮೇಯರ್ ಬಿಲ್ಲಿ ಮೇಕೀನಿ ಸಾಹಿಬ್‌ರು ತನ್ನ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿಕೊಂಡರು: ಫತ್‌ಹೇ ಅಝೀಂ ಮಸೀದಿಯ ಉದ್ಘಾಟನೆಯ ವೇಳೆ ಅಹ್ಮದಿಯಾ ಜಮಾಅತಿನ ಜಾಗತಿಕ ನೇತಾರರಿಗೆ ಶುಭಾಶಯವನ್ನು ಕೋರುವುದು ನನಗೆ ಅತ್ಯಂತ ಗೌರವದ ಸಂಗತಿಯಾಗಿದೆ. ಈ ಆರಾಧನಾಲಯವು ನಮ್ಮ ಗತಕಾಲ ಮತ್ತು ಭವಿಷ್ಯದ ನಡುವೆ ಒಂದು ಸೇತುವೆಯಂತೆ ಆಗಲಿ ಎಂದು ನಾನು ಬಯಸುತ್ತೇನೆ. ಈ ಪಟ್ಟಣಕ್ಕಾಗಿ ಅಹ್ಮದಿಯಾ ಕಮ್ಯುನಿಟಿ ಮಹತ್ತಾದ ಸೇವೆಗಳನ್ನು ಮಾಡಿದೆ. ಅದಕ್ಕಾಗಿ ನಾನು ಧನ್ಯನಾಗಿದ್ದೇನೆ. ನಾವು ಈ ಪಟ್ಟಣದ ಕೀಲಿಗೈಯನ್ನು ಅಹ್ಮದಿಯಾ ಜಮಾಅತಿನ ಇಮಾಮರಿಗೆ ನೀಡುತ್ತೇವೆ.

ಮೆಂಬರ್ ಆಫ್ ಇಲ್ಲಿನೋಯ್ಸ್ ಜನರಲ್ ಅಸೆಂಬ್ಲಿ, ಆನ್ರೇಬಲ್ ಜೋಯಿಸ್ ಮೇಸನ್ ಹೀಗೆ ಹೇಳಿದರು: ಝಿಯೋನಿನಲ್ಲಿ ಈ ಮಸೀದಿಯ ಐತಿಹಾಸಿಕ ಸಮಾರಂಭದ ಭಾಗವಾಗುವುದು ನನಗೆ ಗೌರವದ ಸಂಗತಿಯಾಗಿದೆ. ಇಂದು ಈ ಪಟ್ಟಣಕ್ಕೆ ಇದೊಂದು ಐತಿಹಾಸಿಕ ದಿನವಾಗಿದೆ. ಈ ಪಟ್ಟಣದ ಬಾಗಿಲುಗಳನ್ನು ಅಲೇಕ್ಸಾಂಡರ್ ಡೂಯಿ ತನ್ನನ್ನು ನಂಬಿದವರಿಗೆ ಹೊರತುಪಡಿಸಿ ಇತರ ಎಲ್ಲರಿಗೂ ಮುಚ್ಚಿದ್ದರು. ಆದರೆ ಇಂದು ಈ ಪಟ್ಟಣದ ಬಾಗಿಲು ಎಲ್ಲರಿಗಾಗಿ ತೆರೆಯಲಾಗಿದೆ. ನಾನು ಅದಕ್ಕಾಗಿ ಅಹ್ಮದಿಯಾ ಕಮ್ಯೂನಿಟಿಗೆ ಶುಭಾಶಯಗಳನ್ನು ಅರ್ಪಿಸುತ್ತೇನೆ. ಈ ಮಸೀದಿಯು ಈ

ಪಟ್ಟಣಕ್ಕೆ ಮಾತ್ರವಲ್ಲ, ಬದಲಾಗಿ ಎಲ್ಲ ಕಡೆಗಳಿಗೂ ಪ್ರತೀಕ್ಷೆಯ ಒಂದು ಕಿರಣವಾಗಲಿ ಎಂದು ನಾನು ಮನಸ್ಸಾರೆ ಆಶಿಸುತ್ತೇನೆ. ನಾನು ಈ ಕಮ್ಯೂನಿಟಿಗೆ ಮಸೀದಿಯ ಉದ್ಘಾಟನೆಯ ಶುಭಾಶಯವನ್ನು ಕೋರುತ್ತಾ ಒಂದು ಠರಾವನ್ನು ಸಮರ್ಪಿಸುತ್ತೇನೆ.

ಒಬ್ಬ ಅತಿಥಿಯಾದ ಜನಿಫರ್ ಹೇಳುತ್ತಾರೆ: ನಿಮ್ಮ ಜಮಾಅತಿನ ತತ್ವಗಳು ಬಹಳ ಉನ್ನತ ಮಟ್ಟದ್ದಾಗಿವೆ. ನೀವು ಝಿಯೋನಿನ ಪಟ್ಟಣದಲ್ಲಿ ಹೆಜ್ಜೆ ಹಾಕುವಾಗ ಒಂದು ಹಳೆಯ ಕಟ್ಟಡದಲ್ಲಿ "ಪ್ರೀತಿ ಎಲ್ಲರೊಡನೆ, ಯಾರೊಡನೆಯೂ ಹಗೆಯಿಲ್ಲ" ಎಂಬ ಸಂದೇಶ ಕಾಣಬಹುದಾಗಿದೆ ಮತ್ತು ಅದರ ಪ್ರತಿಧ್ವನಿ ನಿಮ್ಮ ಜೊತೆಗೆ ಇರುತ್ತದೆ. ಇದೇ ಝಿಯೋನ್ ಪಟ್ಟಣದ ನಿಜವಾದ ಚೈತನ್ಯವಾಗಿದೆ.

ಡೇಲಾಸ್‌ನಲ್ಲೂ ಮಸೀದಿಯ ಉದ್ಘಾಟನೆ ನಡೆದಿತು. ಅದರಲ್ಲಿ 140 ಮುಸ್ಲಿಮೇತರರು ಮತ್ತು ಅಹ್ಮದಿಯೇತರ ಅತಿಥಿಗಳು ಭಾಗವಹಿಸಿದ್ದರು. ಎಲನ್ ಪಟ್ಟಣದ ಕೀಲಿಗೈಯನ್ನು ಸಮರ್ಪಿಸಿದ ಸಿಟಿ ಕೌನ್ಸಿಲ್ ಮೆಂಬರ್ ಹೀಗೆ ಹೇಳಿದರು: ಇಂದು ಬೈತುಲ್ ಇಕ್ರಾಂ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದು ಒಂದು ಹಿರಿದಾದ ಗೌರವದ ಮಾತಾಗಿದೆ. ನಾನು ಅಹ್ಮದಿಯಾ ಜಮಾಅತಿಗೆ ಅದಕ್ಕಾಗಿ ಶುಭಾಶಯಗಳನ್ನು ಕೋರುತ್ತೇನೆ. ಈ ಪಟ್ಟಣದ ನಿರ್ಗತಿಕರಿಗೆ ಸಹಾಯ ಮಾಡುವ ಅಹ್ಮದಿಯಾ ಜಮಾಅತಿನ ಸೇವೆಗಳನ್ನು ನಾವು ಪ್ರಶಂಸಿಸುತ್ತೇವೆ. ಶಾಂತಿಪ್ರಿಯ ಮತ್ತು ಮನುಕುಲದ ಸೇವೆ ಮಾಡುವ ಒಂದು ಕಮ್ಯೂನಿಟಿಯು ಇಲ್ಲಿ ಮಸೀದಿಯನ್ನು ನಿರ್ಮಿಸಿದೆ ಎಂಬುದು ಈ ಪಟ್ಟಣದ ಸೌಭಾಗ್ಯವಾಗಿದೆ. ಈ ಮಸೀದಿಯು ಈ ಪಟ್ಟಣ ಮತ್ತು ಈ ಪ್ರದೇಶಗಳಿಗೆ ಆಶಾಕಿರಣವಾಗಲಿ ಎಂದು ನಾನು ಬಯಸುತ್ತೇನೆ.

ಸದರ್ನ್ ಯೂನಿವರ್ಸಿಟಿಯ ಪ್ರೊಫೆಸರ್ ಡಾಕ್ಟರ್ ರಾಬರ್ಟ್ ಹಂಟ್ ಈ ಸಮಾರಂಭಕ್ಕೆ ತನ್ನನ್ನು ಆಮಂತ್ರಿಸಿದ್ದಕ್ಕಾಗಿ ಕೃತಜ್ಞತೆ ಅರ್ಪಿಸಿದರು ಮತ್ತು ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಂ ಎರಡು ಗುಣಗಳನ್ನು ಬೆಂಬಲಿಸಲು ಪ್ರಯತ್ನಿಸುತ್ತಾರೆ. ಒಂದು ಧಾರ್ಮಿಕ ಸ್ವಾತಂತ್ರ್ಯ ಮತ್ತು ಎರಡನೆಯದು ಧರ್ಮಗಳ ಅನ್ಯೋನ್ಯ ಮಾತುಕತೆ. ಅಹ್ಮದಿಯಾ ಜಮಾಅತನ್ನು ದೌರ್ಜನ್ಯಕ್ಕೆ ಗುರಿಪಡಿಸಲಾಗಿದೆ ಎಂಬುದಕ್ಕೆ ಚರಿತ್ರೆ ಸಾಕ್ಷ್ಯವಹಿಸುತ್ತದೆ. ಆದ್ದರಿಂದ ಈ ಜಮಾಅತ್ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಬಹಳ ಪ್ರಯತ್ನ ಮಾಡುತ್ತದೆ. ನಾವು ಪರಸ್ಪರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಗೌರವ ನೀಡುವ ತನಕ ಪಂಥೀಯ ಭಿನ್ನತೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ.

ಒಬ್ಬ ಮುಸ್ಲಿಂ ಅತಿಥಿಯಾದ ಸುಲ್ತಾನ್ ಚೌಧರಿ ಸಾಹಿಬ್ 'ಅಹ್ಮದಿಯಾ ಜಮಾಅತಿನ ಇಮಾಂ ಲೋಕಕ್ಕೆ ಶಾಂತಿಯ ಒಂದು ಅತ್ಯುತ್ತಮ ಸಂದೇಶವನ್ನು ನೀಡಿರುವರು' ಎಂದು ಹೇಳಿದರು. ಮತ್ತೋರ್ವ ಮುಸ್ಲಿಂ ಅತಿಥಿಯಾದ ಡಾಕ್ಟರ್ ಹಲೀಮುರ್ರಹ್ಮಾನ್ ಸಾಹಿಬ್ ಹೀಗೆ ಹೇಳಿದರು: ಈ ಸಮಾರಂಭದ ಏರ್ಪಾಡು ಮತ್ತು ಅತಿಥಿ ಸತ್ಕಾರ ಅದ್ಭುತವಾಗಿತ್ತು. ನನಗೆ ನೀಡಲಾದ ಗೌರವಕ್ಕೆ ನಾನು ಅರ್ಹನಾಗಿರಲಿಲ್ಲ. ಈ ಎಲ್ಲ ವಾತಾವರಣವನ್ನು ನೋಡಿ ಮತ್ತು ನೀವು ನೀಡಿದ ಗೌರವದಿಂದ ನನ್ನ ಕಣ್ಣುಗಳು ತೇವಗೊಂಡಿವೆ. ಇಸ್ಲಾಮಿನ ನೈಜ ಪಾಠಗಳನ್ನು ಪಾಲಿಸುವ ಅತ್ಯುತ್ತಮ ಜನರ ನಡುವೆ ಸಮಯ ಕಳೆಯಲು ನನಗೆ ಸಂದರ್ಭ ಸಿಕ್ಕಿತು.

ಒಬ್ಬ ಮಹಿಳೆ ವಿಕ್ಟೋರಿಯ ಸಾಹಿಬ ಹೇಳುತ್ತಾರೆ: ನನಗೆ ಇಲ್ಲಿ ಅತ್ಯಂತ ವಿಶಿಷ್ಟ ಸಂಗತಿಯಾಗಿ ಕಂಡದ್ದು ಅಹ್ಮದಿಯಾ ಜಮಾಅತಿನ ನೇತಾರರ ಭಾಷಣವಾಗಿತ್ತು. ಧಾರ್ಮಿಕ ಭಿನ್ನತೆ ಮತ್ತು ವಿವಿಧ ದೃಷ್ಟಿಕೋನಗಳಿದ್ದರೂ ಹೇಗೆ ನಾವೆಲ್ಲರೂ ಪರಸ್ಪರ ಹೊಂದಿಕೊಂಡಿದ್ದೇವೆ ಎಂದು ಅವರು ವಿವರಿಸಿದ್ದರು. ಧರ್ಮಗಳ ನಡುವೆ ಮಾತುಕತೆಯಲ್ಲಿ ಇದರ ಕೊರತೆಯನ್ನು ಕಾಣಬಹುದಾಗಿದೆ.

ಓರ್ವ ಮಹಿಳೆ ಅತಿಥಿಯೂ ಈ ಮಸೀದಿಯ ನೆರೆಯವರೂ ಆದ ಮೇರಿ ಮಾಕ್‌ಡರ್‌ಮಟ್‌ರಿಗೆ ಬಹಳ ದೊಡ್ಡ ಭೂಸ್ವತ್ತು ಇದೆ ಮತ್ತು ಅವರು ಪಾರ್ಕಿಂಗಿಗಾಗಿ ಸ್ಥಳವನ್ನು ಸಹ ನೀಡಿದ್ದರು. ಅವರು ಹೇಳುತ್ತಾರೆ: ಇಂದು ಈ ಕಾರ್ಯಕ್ರಮಕ್ಕಾಗಿ ಜಾಗವನ್ನು ಕೊಟ್ಟದ್ದರಿಂದ ನನಗೆ ಉಂಟಾದ ಸಂತೋಷದಷ್ಟು ಈ ಧೂಳು ತುಂಬಿದ ಭೂಸ್ವತ್ತಿನ ಕಾರಣದಿಂದ ನನಗೆ ಹಿಂದೆಂದೂ ಸಂತೋಷ ಉಂಟಾಗಿರಲಿಲ್ಲ.

(ಹುಝೂರ್ ಹೇಳಿದರು:) ಡೀಲಾಸ್‌ನಿಂದ ಐವತ್ತು ಐವತ್ತೈದು ಮೈಲುಗಳ ದೂರದ ಒಂದು ಪ್ರದೇಶವಾದ ಫೋರ್ಟ್‌ವರ್ಥ್‌ನಲ್ಲಿ ನಾಲ್ಕು ಮುಕ್ಕಾಲು ಏಕರೆ ಭೂಪ್ರದೇಶದಲ್ಲಿ ಒಂದು ಕಟ್ಟಡವನ್ನು ಖರೀದಿ ಮಾಡಲಾಗಿತ್ತು. ಅದಕ್ಕೆ ಮಸೀದಿಯ ರೂಪವನ್ನು ನೀಡಲಿಕ್ಕಾಗಿ ಅಲ್ಲಿ ಒಂದು ಗುಮ್ಮಟ ಮತ್ತು ಎರಡು ಮೀನಾರಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಅದು ಉತ್ತಮವಾದ ಒಂದು ಪ್ರದೇಶವಾಗಿದೆ. ಜಮಾಅತಿನ ಜನರು ಅಲ್ಲಿ ನಮಾಝ್‌ಗಳನ್ನು ಸಹ ನಿರ್ವಹಿಸುತ್ತಾರೆ. ನನಗೂ ಅಲ್ಲಿ ಮಗ್‌ರಿಬ್ ಮತ್ತು ಇಶಾ ನಮಾಝಿನ ಇಮಾಮತ್ ವಹಿಸಲು ಸಂದರ್ಭ ಸಿಕ್ಕಿತು. ಫೋರ್ಟ್ ವರ್ತ್‌ನಲ್ಲಿ ನೆಲೆಸಿರುವ ಒಬ್ಬ ಅತಿಥಿಯಾದ ಏಬೆ ಕರ್‌ಕ್ ಸಾಹಿಬ್‌ರು, ಅವರು ಡೀಲಾಸಿಗೆ ಮಸೀದಿಯ ಉದ್ಘಾಟನೆಗಾಗಿ ಸಹ ಬಂದಿದ್ದರು, ಅವರು ಹೇಳುತ್ತಾರೆ: ಅಲ್ಲಾಹನ ಇಂಗಿತ ಪ್ರಕಾರ ಪರಸ್ಪರ ಹೊಂದಿಕೊಂಡು ಕೆಲಸ ಮಾಡಬೇಕೆಂಬ ಸಂದೇಶವನ್ನು ಜಮಾಅತಿನ ಇಮಾಮರು ಬಹಳ ಉತ್ತಮವಾದ ರೀತಿಯಲ್ಲಿ ನೀಡಿದರು. ಶಾಂತಿಸ್ಥಾಪನೆ ಹಾಗೂ ನ್ಯೂಕ್ಲಿಯರ್ ಯುದ್ಧದಿಂದ ರಕ್ಷಣೆ ಪಡೆಯಲು ನೀಡಲಾದ ಸಂದೇಶಕ್ಕೆ ನಾನು ಪ್ರಾಮುಖ್ಯವನ್ನು ನೀಡುತ್ತೇನೆ.

ಫೋರ್ಟ್‌ವರ್ಥ್‌ನಿಂದಲೇ ಡೀಲಾಸಿಗೆ ಬಂದಿದ್ದ ಒಂದು ಚರ್ಚಿನ ಮೆಂಬರ್ ಹೇಳುತ್ತಾರೆ: ಬಹಳ ವೈಭವಶಾಲಿ ಸಂದೇಶವಾಗಿತ್ತು. ಪ್ರತಿಯೊಬ್ಬರೂ ಖಲೀಫರ ಈ ಸ್ಪಷ್ಟವಾದ ಸಂದೇಶವನ್ನು ಖಂಡಿತ ಆಲಿಸಬೇಕು. ಹೈಸ್ಕೂಲಿನ ಟೀಚರ್ ಒಬ್ಬರು ಹೇಳುತ್ತಾರೆ: ಖಲೀಫರ ಎರಡು ಮಾತುಗಳು ನನ್ನನ್ನು ಬಹಳ ಪ್ರಭಾವಿತಗೊಳಿಸಿವೆ. ಒಂದು, ಸಮಾಜದಲ್ಲಿ ಇಸ್ಲಾಮಿನ ಬಗ್ಗೆ ಅಂಜಿಕೆಯಿದೆ ಎಂದು ಅವರು ಒಪ್ಪಿಕೊಂಡರು. ನಾನು ಈ ಸಂಗತಿಗಳನ್ನು ನನ್ನ ವಿದ್ಯಾರ್ಥಿಗಳಲ್ಲಿ ನೋಡುತ್ತಿರುತ್ತೇನೆ. ನಾನು

ಪ್ರಶಂಸಿಸುವ ಎರಡನೇ ಸಂಗತಿಯೇನೆಂದರೆ, ನ್ಯೂಕ್ಲಿಯರ್ ಆಯುಧಗಳನ್ನು ಪ್ರಯೋಗಿಸುವುದರ ವಿರುದ್ಧ ಖ಼ಲೀಫ಼ರು ಮುನ್ನೆಚ್ಚರಿಕೆ ನೀಡಿದ್ದರು. ಇಂದಿನ ಪರಿಸ್ಥಿತಿಯಲ್ಲಿ ಈ ರೀತಿಯ ವಿವೇಕಯುತ ಸಂದೇಶವನ್ನು ಆಲಿಸಿ ಬಹಳ ಸಂತೋಷವಾಯಿತು.

(ಹುಝೂರ್ ಹೇಳಿದರು:) ಝಿಯೋನಿನ ಫತ್‌ಹೇ ಅಝೀಂ ಮಸೀದಿಯಲ್ಲಿ ಡೋಯಿಯ ಮುಬಾಹಲಕ್ಕೆ ಸಂಬಂಧಿಸಿ ಒಂದು ಪ್ರದರ್ಶನವನ್ನು ಸಹ ಹಮ್ಮಿಕೊಳ್ಳಲಾಗಿತ್ತು. ಈ ಮುಬಾಹಲದ ಬಗ್ಗೆ ಪ್ರಸ್ತಾಪಿಸಿದ 32 ವಾರ್ತಾಪತ್ರಿಕೆಗಳ ಹೆಸರುಗಳನ್ನು ಮಜ್‌ಮೂಅ ಇಶ್ತಿಹಾರಾತಿನ ಮೂರನೇ ಭಾಗದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಬರೆದಿರುವರು. ಅಮೇರಿಕದ ಅಹ್ಮದಿಯಾ ಜಮಾಅತಿನ ಶೋಧನೆ ಪ್ರಕಾರ, ಈ ಮುಬಾಹಲದ ಬಗ್ಗೆ ಪ್ರಸ್ತಾಪಿಸಿದ ಇನ್ನೂ 128 ವಾರ್ತಾಪತ್ರಿಕೆಗಳು ಲಭಿಸಿವೆ. ಈ ರೀತಿಯಾಗಿ ಕೇವಲ ಅಮೇರಿಕದಲ್ಲೇ ಒಟ್ಟು 160 ಪತ್ರಿಕೆಗಳಲ್ಲಿ ಇದರ ಪ್ರಸ್ತಾಪ ಬಂದಿತ್ತು. ಈ ಎಲ್ಲ ವಾರ್ತಾಪತ್ರಿಕೆಗಳು ಡಿಜಿಟಲ್ ರೂಪದಲ್ಲಿ ಈ ಪ್ರದರ್ಶನದಲ್ಲಿ ಇದ್ದುವು. ಅದೇ ರೀತಿಯಲ್ಲಿ ಅನೇಕ ವಾರ್ತಾಪತ್ರಿಕೆಗಳಲ್ಲೂ ನ್ಯೂಸ್ ಚಾನೆಲ್‌ಗಳಲ್ಲೂ ನನ್ನ ಭೇಟಿಗೆ ಸಂಬಂಧಿಸಿದ ವಾರ್ತೆಗಳು ಪ್ರಸಾರಗೊಂಡಿದುವು.

(ಕ್ರೈಸ್ತ ಧರ್ಮದಿಂದ ಅಹ್ಮದಿಯಾದ ಒಬ್ಬ ಅಮೇರಿಕನ್ ನವ ಅಹ್ಮದಿ ಕ್ರಿಸ್ಟೋಫರ್ ಸಾಹಿಬ್‌ರ ಬೈಅತ್ತಿನ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಈ ಬೈಅತ್ತಿನಿಂದ ಹಳೆಯ ಮತ್ತು ವಿವಿಧ ದೇಶಗಳಿಂದ ವಲಸೆ ಬಂದ ಅಹ್ಮದಿಯರ ಮೇಲೂ ಒಂದು ಉತ್ತಮ ಪ್ರಭಾವ ಉಂಟಾಯಿತು. ಅವರಿಗೂ ಬೈಅತ್ ಮಾಡುವ ಸಂದರ್ಭ ಲಭಿಸಿತು. ಅದರಿಂದ ಬಹಳ ಭಾವನಾತ್ಮಕ ಅವಸ್ಥೆ ಉಂಟಾಯಿತು. ಒಟ್ಟಾರೆ ನೋಡುವುದಾದರೆ ಅಲ್ಲಾಹನು ಈ ಪರ್ಯಟನೆಯನ್ನು ಎಲ್ಲ ರೀತಿಯಲ್ಲೂ ಅನುಗ್ರಹಿಸಿದನು. ಅಲ್ಲಾಹನು ಮುಂದೆಯೂ ಸದಾ ಅನುಗ್ರಹಿಸಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔

***Friday Sermon delivered by Hadrath Khaleefatul Masih Al Khamis***[(atba)]

*At, **'Masjid Mubarak',** Islamabad, Tilford, UK, on 21-10-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon